**ಸಾಕ್ಷಿಯನ್ನು ದಿಃ *06/02/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುದವರೆದ ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ.**

ಆರೋಪಿತರಿಗೆ ಕೊಟ್ಟಿದ್ದೇನೆ ಎಂದು ಹೇಳಲಾದ ಸಾಲ ಯಾವ ದಿನಾಂಕ, ಮಾಹೆ ಮತ್ತು ಇಸ್ವಿಯಲ್ಲಿ ಕೊಟ್ಟಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ದಿಃ21-05-2019 ರಂದು ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ನಂತರ ಆರು ತಿಂಗಳ ಅವಧಿಯಲ್ಲಿ 1,50,000/- ಕೊಟ್ಟಿದ್ದೆನೆ ಎಂದ ಹೇಳಲಾದ ಸಾಲ ಯಾವ ದಿನಾಂಕ, ಮಾಹೆ ಮತ್ತು ಇಸ್ವಿಯಲ್ಲಿ ಕೊಟ್ಟಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ಆರು ತಿಂಗಳ ಅವಧಿಯಲ್ಲಿ ಕೊಟ್ಟಿದ್ದೇನೆ, ಆದರೆ ಖಚಿತವಾದ ದಿನಾಂಕ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಸಮಯದಲ್ಲಿ ಭದ್ರತೆಗಾಗಿ ಏನೂ ಪಡೆದುಕೊಂಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸದರಿ ಸಾಲದ ಸಮಯದಲ್ಲಿ ಯಾವುದೇ ದಾಖಲೆ ಮಾಡಿಕೊಂಡಿಲ್ಲ, ನಂತರ ಮರುಪಾವತಿಗಾಗಿ ಚೆಕ್ಕನ್ನು ಕೊಟ್ಟಿರುತ್ತಾರೆ. ಭದ್ರತೆಗಾಗಿ ದಾಖಲೆಗಳನ್ನು ಬರೆಸಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸ್ನೇಹಿತ ನಾತೆಯಿಂದ ಕೊಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ಯಾವುದೇ ರೀತಿ ಸಾಲ ಕೊಡದೆಯಿರುವ ಕಾರಣ ನಾನು ಲಿಖಿತವಾಗಿ ಬರೆಸಿಕೊಂಡಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ಸದರಿ ಸಾಲವನ್ನು ಆದಾಯ ತೆರಿಗೆ ವಿವರಗಳ ಪಟ್ಟಿಯಲ್ಲಿ ಬರೆದಿಲ್ಲ ಎಂದರೆ ನಿಜ.

ನಾನು ಮಾರ್ಗದರ್ಶಿ ಚಿಟ್ಸ್ ಫಂಡನಲ್ಲಿ ಸಾಲ ಪಡೆದಿರುತ್ತೇನೆ ಎಂದರೆ ನಿಜ. ಸದರಿ ಸಾಲಕ್ಕೆ ಆರೋಪಿತರು ಜಾಮೀನುದಾರರು ಇದ್ದರು ಎಂದರೆ ನಿಜ. ಸದರಿ ಮಾರ್ಗದರ್ಶಿ ಚಿಟ್ಸ್ ಫಂಡನವರು ಜಾಮೀನುದಾರರಾದ ಆರೋಪಿತರಿಗೆ ದಿಃ28-01-2026 ರಂದು ಕಳುಹಿಸಿದ ನೋಟೀಸನ್ನು ಸಾಕ್ಷಿದಾರರು ನೋಡಿ ಒಪ್ಪಿರುವ ಕಾರಣ ಅದನ್ನು ***ನಿ.ಡಿ.1*** ಎಂದು ಗುರುತಿಸಲಾಯಿತು.

ಆರೋಪಿತರು ದಿಃ18-01-2024 ಕ್ಕೆ ಐವತ್ತು ಸಾವಿರ ರೂಪಾಯಿಗಳಂತೆ ಎರಡು ಬಾರಿ ಅಂದರೆ ಒಂದು ಲಕ್ಷ ರೂಪಾಯಿಗಳನ್ನು ಮರುಪಾವತಿ ಮಾಡಿದ್ದಾರೆ ಎಂದರೆ ನಿಜ. ಸಾಕ್ಷಿದಾರರು ಸಂಬಂಧಿತ ದಾಖಲೆ ನೋಡಿ ಒಪ್ಪಿರುವ ಕಾರಣ ಅದನ್ನು ***ನಿ.ಡಿ.2*** ಎಂದು ಗುರುತಿಸಲಾಯಿತು. ಈ ರೀತಿ ಒಂದು ಲಕ್ಷ ರೂಪಾಯಿಗಳ ಮರುಪಾವತಿ ಕುರಿತು ನಾನು ಕಳುಹಿಸಿದ ಕಾನೂನುಬದ್ದ ನೋಟೀಸಿನಲ್ಲಿ ಅಥವಾ ಫಿರ್ಯಾದಿಯಲ್ಲಿ ಕಾಣಿಸಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಒಂದು ಲಕ್ಷದ ವ್ಯವಹಾರ ಮತ್ತು ಪ್ರಸ್ತುತ

ವ್ಯವಹಾರ ಬೇರೆ ಬೇರೆ ಇರುತ್ತದೆ ಎಂದು ಉತ್ತರಿಸುತ್ತಾರೆ. ಈ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ರಂತೆ ಇರುವ ಚೆಕ್ಕಿನ ದಿನಾಂಕ, ವಿವರಗಳು ಮತ್ತು ಮೊತ್ತವನ್ನು ನಾನೇ ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ಮತ್ತು ನನ್ನ ಮಧ್ಯ ಇರುವ ಮೊದಲಿನ ವ್ಯವಹಾರಗಳಲ್ಲಿ ಪಡೆದುಕೊಂಡ ಚೆಕ್ಕನ್ನು ದುರುಪಯೋಗ ಮಾಡಿಕೊಂಡು, ಚೆಕ್ಕಿನ ವಿವರಗಳನ್ನು ನಾನೇ ಬರೆದುಕೊಂಡು ಆರೋಪಿತರ ವಿರುದ್ದ ಈ ರೀತಿ ಸುಳ್ಳು ಪ್ರಕರಣ ಹೂಡಿದ್ದೇನೆ ಎಂದರೆ ಸರಿಯಲ್ಲ. ಚೆಕ್ಕಿನ ಮೇಲಿರುವ ಸಹಿಗೆ ಮತ್ತು ಬರವಣಿಗೆಗೆ ವ್ಯತ್ಯಾಸ ಕಂಡು ಬರುತ್ತಿದೆ ಎಂದರೆ ಸರಿಯಲ್ಲ.

ನಮ್ಮ ಅಂಗಡಿಯಲ್ಲಿ ಒಂದು ಬಾರಿ ಬೆಂಕಿ ಹತ್ತಿಕೊಂಡಿದ್ದು ಎಂದರೆ ನಿಜ. ಸದರಿ ಬೆಂಕಿ ಪ್ರಕರಣದಲ್ಲಿ ಪೊಲೀಸರ ಮುಂದೆ ನನ್ನ ಕಾಗದಪತ್ರಗಳು ಸುಟ್ಟು ಹೋಗಿವೆ ಎಂದ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೊದಲಿನ ವ್ಯವಹಾರದ ಪೈಕಿ ಆರೋಪಿತರು ಮರಳಿ ಕೊಡಬೇಕು ಎಂದ ಕೇಳಿದಾಗ ಸದರಿ ಬೆಂಕಿಯಲ್ಲಿ ಅದು ಸುಟ್ಟು ಹೋಗಿದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.1 ರಂತೆ ಇರುವ ಚೆಕ್ಕಿಗೆ ಮತ್ತು ಆರೋಪಿತರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಈ ರೀತಿ ಇದ್ದರೂ ಸಹ ಹೇಗಾದರೂ ಮಾಡಿ ಹಣ ಪಡೆಯುವ ಉದ್ದೇಶದಿಂದ ಈ ರೀತಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.